# ಉಪವಿಭಾಗಾಧಿಕಾರಿಗಳ ನ್ಯಾಯಾಲಯ. ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 119/15-16**

ದಿನಾಂಕ : ೨೬ - 10 -2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

ಮೇಲ್ಮನವಿದಾರರು

ಪುರುಷೋತ್ತಮ ನಾಯ್ಕ

ಬಿನ್ : ಮಹಾಲಿಂಗ ನಾಯ್ಕ

ಹಂದ್ರಟ್ಟ, ರೈಲ್ವೇ ಸ್ಟೇಷನ್ ಬಳಿ,

ಪುತ್ತೂರು ಕಸಬಾ ಗ್ರಾಮ,

ಪುತ್ತೂರು ತಾಲೂಕು ದ.ಕ.

(ನ್ಯಾಯವಾದಿ ಶ್ರೀ ಬೆಟ್ಟ ಪಿ ಈಶ್ವರ ಭಟ್)

- ಮತ್ತು -

ಪ್ರತಿವಾದಿಯವರು

ತಹಶೀಲ್ದಾರರು

ಪುತ್ತೂರು ತಾಲೂಕು ದ.ಕ.

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಪುತ್ತೂರು ತಾಲೂಕು ಪುತ್ತೂರು ಕಸಬಾ ಗ್ರಾಮದ MR: 229/93-94 ರಂತೆ ತಹಶೀಲ್ದಾರರು ನೀಡಿದ ನೋಂದಣಿ ವ್ಯವಸ್ಥಾಪತ್ರ ದಸ್ತಾವೇಜಿನ ಮೂಲ ಪ್ರತಿ ಹಾಜರುಪಡಿಸಿರುವುದಿಲ್ಲ ಎಂದು ಮ್ಯುಟೇಶನ್ ತಿರಸ್ಕರಿಸಿ ಮಾಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಪುತ್ತೂರು ಕಸಬಾ ಗ್ರಾಮದ ಸ.ನಂ. 105/1B ವಿಸ್ತೀರ್ಣ 0.63 ಎಕ್ರೆ, 105/1A ವಿಸ್ತೀರ್ಣ 0.63 ಎಕ್ರೆ, 106/2 ವಿಸ್ತೀರ್ಣ 1.10 ಎಕ್ರೆ, 106/1 ವಿಸ್ತೀರ್ಣ 1.10 ಎಕ್ರೆ ಜಮೀನುಗಳನ್ನು ಅಪೀಲುದಾರರಿಗೆ ಪುತ್ತೂರು ಸ.ರಿ. ಕಛೇರಿ ದಸ್ತಾವೇಜು ನಂಬ್ರ 253/77-78 ರಂತೆ ಮೇಲ್ಮನವಿದಾರರ ಅಜ್ಜ ರಾಮನಾಯ್ಕರು ಬರಕೊಟ್ಟಿರುತ್ತಾರೆ. ಆದರೆ ಸ.ನಂ. ಬರೆಯುವಾಗ ಎರಡು ಐಟಂ ಬಿಟ್ಟು ಹೋದ ಬಗ್ಗೆ ಪುನಃ ದಿನಾಂಕ: 22-02-1978 ದುರಸ್ತಿ ಪತ್ರ ಪಡಿಸಿ ಮೇಲೆ ಹೇಳಿದ ನಾಲ್ಕು ಸರ್ವೆ ನಂಬ್ರ ಗಳನ್ನು ಕಾಣಿಸಲಾಗಿದೆ. ಈ ಪೈಕಿ ಕೆಲವು ಹಾಸನ – ಮಂಗಳೂರು ರೈಲ್ವೆ ಬಗ್ಗೆ ಭೂ ಸ್ವಾಧೀನಗೊಂಡು ಸ.ನಂ. 105/1A ವಿಸ್ತೀರ್ಣ 0.63 ಎಕ್ರೆ ಮತ್ತು 106/1 ವಿಸ್ತೀರ್ಣ 1.10 ಎಕ್ರೆ ಜಮೀನು ಮಾತ್ರ ಇದ್ದುದಾಗಿರುತ್ತದೆ. ಸದ್ರಿ ರಾಮ ನಾಯ್ಕರು ಮೃತರಾಗಿದ್ದರೂ, ವ್ಯವಸ್ಥಾಪತ್ರ ಮಾಡಿಕೊಟ್ಟಿದ್ದರೂ ಅವರ ಹೆಸರು ಇನ್ನೂ ಪಹಣಿಯಲ್ಲಿ ಮುಂದುವರಿದಿದೆ. ಆದ ಕಾರಣ ಈ ಲಭ್ಯ ಇರುವ ಜಮೀನು ಸ.ನಂ. 105/1A3 ವಿಸ್ತೀರ್ಣ 0.30 ಎಕ್ರೆ ಮತ್ತು 106/1B ವಿಸ್ತೀರ್ಣ 0.92 ಎಕ್ರೆಯ ಪಹಣಿಯಿಂದ ದಿ| ರಾಮ ನಾಯ್ಕರ ಹೆಸರನ್ನು ಲೋಪಪಡಿಸಿ ಅಪೀಲುದಾರರೊಬ್ಬರ ಹೆಸರನ್ನು ಮಾತ್ರ ಪಹಣಿಯಲ್ಲಿ ಉಳಿಸುವಂತೆ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯಿತಿಗಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 52 ಹಾಗೂ ಕಾಲ ಪರಿಮಿತಿ ಅಧಿನಿಯಮದ ಕಲಂ 5 ರಡಿ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 30-12-2014 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 15-03-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಛರಿಸುತ್ತಾ ಪುತ್ತೂರು ತಾಲೂಕು ಸ.ರಿ. ಕಛೇರಿಯಲ್ಲಿ ನೋಂದಣಿಯಾದ ವ್ಯವಸ್ಥಾಪತ್ರ ದಿನಾಂಕ: 26-07-1977 ದಸ್ತಾವೇಜು ನಂಬ್ರ 253/77-78 ಹಾಗೂ ದುರಸ್ತಿ ಪತ್ರ 620/77-78 ದಿನಾಂಕ: 22-02-1978 ರ ಪ್ರಕಾರ ಪುತ್ತೂರು ಕಸಬಾ ಗ್ರಾಮದ ಸ.ನಂ. 105/1A3 ವಿಸ್ತೀರ್ಣ 0.30 ಎಕ್ರೆ ಮತ್ತು 106/1ಬಿ ವಿಸ್ತೀರ್ಣ 0.92 ಎಕ್ರೆ ಜಮೀನುಗಳ ಪಹಣಿಯಲ್ಲಿ ದಿ| ರಾಮ ನಾಯ್ಕರ ಹೆಸರನ್ನು ಲೋಪಪಡಿಸಿ ಮೇಲ್ಮನವಿದಾರರ ಹೆಸರನ್ನು ಮಾತ್ರ ದಾಖಲಿಸಲು ಆದೇಶಿಸಿ ಅಪೀಲನ್ನು ಪುರಸ್ಕರಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರ ಕೋರಿಕೆ ಸಮಂಜಸವಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.

ಪುತ್ತೂರು ತಹಶೀಲ್ದಾರರ ಪುತ್ತೂರು ಕಸಬಾ ಗ್ರಾಮದ MR: 229/93-94 ರ ಮ್ಯುಟೇಶನ್ ಆದೇಶವನ್ನು ರದ್ದುಗೊಳಿಸಿದೆ . ಪ್ರಕರಣವನ್ನು ಮರು ಪರಿಶೀಲನೆ ನಡೆಸಿ ಪುತ್ತೂರು ತಾಲೂಕು ಸ.ರಿ. ಕಛೇರಿಯಲ್ಲಿ ನೋಂದಣಿಯಾದ ವ್ಯವಸ್ಥಾಪತ್ರ ದಿನಾಂಕ: 26-07-1977 ದಸ್ತಾವೇಜು ನಂಬ್ರ 253/77-78 ಹಾಗೂ ದುರಸ್ತಿ ಪತ್ರ 620/77-78 ದಿನಾಂಕ: 22-02-1978 ರ ಭೂ ಸ್ವಾಧೀನತೆ ಆದ ಭೂಮಿಯನ್ನು ಹೊರತುಪಡಿಸಿ, ಉಳಿದ ಜಮೀನಿನ ಪ್ರಕಾರ ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲಿಸಲು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಜರಗಿಸಲು ಪುತ್ತೂರು ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: ೨೬- 10 -2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಬೆಟ್ಟ ಪಿ ಈಶ್ವರ ಭಟ್ ,ಪುತ್ತೂರು ತಾಲೂಕು ಇವರ ಮುಖಾಂತರ ಜ್ಯಾರಿ.
ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.